ಸಾಕ್ಷಿಯನ್ನು 25.03.2023 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ

1. ಚಿಕ್ಕತಾಯಮ್ಮ ವಾದಿ ನನ್ನ ತಾಯಿ , ಗಿರಿಜಮ್ಮ 1ನೆ ಪ್ರತಿವಾದಿ ನನ್ನ ದೊಡ್ಡಮ್ಮ . 1ನೇ ಪ್ರತಿವಾದಿಗೆ 3 ಜನ ಮಕ್ಕಳು. ಅವರ ಹೆಸರು ಕೆಂಪೆರಾಜು , ಸತೀಶ ಹಾಗೂ ರಾಜು. ಸತೀಶ ಅಂದರೆ 3ನೆ ಪ್ರತಿವಾದಿ ಹಾಗೂ ರಾಜುರವರು ಮೂಗ ಮತ್ತು ಕಿವುಡರಾಗಿರುತ್ತಾರೆ ಅವರಿಗೆ ಕೇಳಲು ಮತ್ತು ಮಾತನಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಯಾವುದೆ ತಿಳುವಳಿಕೆ ಇಲ್ಲ ಎಂದರೆ ಸರಿಯಲ್ಲ. ವಾದಿ ಬರೆಸಿಕೊಟ್ಟಿರುವ ಕ್ರಯದ ಕರಾರು ಪತ್ರ ಸುಳ್ಳು ಎಂದರೆ ಸರಿಯಲ್ಲ. 2ನೆ ಪ್ರತಿವಾದಿಗು ಕೂಡ ತಿಳುವಳಿಕೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ವಾದಿ ಮತ್ತು 1ನೇ ಪ್ರತಿವಾದಿ ಸೇರಿಕೊಂಡು 2ನೆ ಪ್ರತಿವಾದಿಗೆ ತಿಳವಳಿಕೆ

ಇಲ್ಲದ ಕಾರಣ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಒಂದು ಮಗುವನ್ನು ಸಾಕಿಕೊಂಡಿದ್ದಾರೆ ಆದರೆ ದತ್ತುಪಡೆದುಕೊಂಡಿರುವುದಿಲ್ಲ. 2ನೆ ಪ್ರತಿವಾದಿಗೆ ಆಸ್ತಿ ದಕ್ಕಬಾರದು ಎಂಬ ಉದ್ದೇಶದಿಂದ ವಾದಿ ಮತ್ತು 1ನೆ ಪ್ರತಿವಾದಿ ಸುಳ್ಳು ಕ್ರಯದಕರಾರು ಪತ್ರವನ್ನು ಸೃಷ್ಟಿಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ವಕೀಲರ ಮೂಲಕ ನೀಡಿರುವ ನೋಟಿಸಿಗೆ 2ನೆ ಪ್ರತಿವಾದಿ ಪ್ರತ್ಯುತ್ತರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 2ನೆ ಪ್ರತಿವಾದಿ ಪ್ರತ್ಯುತ್ತರ ಕೊಟ್ಟಿದ್ದರು ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಾವಾ ಆಸ್ತಿ ದರಕಾಸ್ತು ಜಮೀನು ಎಂದರೆ ಸರಿ. ದರಕಾಸ್ತು ಜಮೀನು ಆಗಿರುವುದರಿಂದ ನ್ಯಾಯಾಲಯದ ಮೂಲಕ ಖರೀದಿ ಪಡಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1ನೆ ಪ್ರತಿವಾದಿ ಆಗಲಿ ಅಥವಾ 2ನೆ ಪ್ರತಿವಾದಿ ಆಗಲಿ ನಮ್ಮಿಂದ ಯಾವುದೇ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದಾವೆ 172/19ರಲ್ಲಿ ನಾನು ಈಗಾಗಲೆ ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಿ ಭಾಗಶಃ ಡಿಕ್ರಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ಪ್ರತಿವಾದಿ 2 ಮತ್ತು 3 ರವರ ದಡ್ಡತನವನ್ನು ದುರುಪಯೋಗಪಡಿಸಿಕೊಂಡು ನಾನು , ವಾದಿ ಹಾಗೂ 1ನೆ ಪ್ರತಿವಾದಿ ಕ್ರಯದ ಕರಾರು ಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಅಕ್ರಮವಾಗಿ ಜಮೀನು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ